ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

**ವಾರ್ತಾ ಇಲಾಖೆ**

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001

ಸಂಖ್ಯೆ: ವಾಇ : ಸುಮಪ : ಪ ಪ್ರ : 2014–15 : ಜುಲೈ 4 , 2014

## ಪತ್ರಿಕಾ ಪ್ರಕಟಣೆ

### ಕೇಂದ್ರ ಸಚಿವ ನರೇಂದ್ರ ಸಿಂಗ್ ತೋಮರ್ ಜೊತೆ ಮುಖ್ಯಮಂತ್ರಿ ಮಾತುಕತೆ

ಬೆಂಗಳೂರು, ಜುಲೈ 4 (ಕರ್ನಾಟಕ ವಾರ್ತೆ) :

ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಅವರು ಬೆಂಗಳೂರಿಗೆ ಆಗಮಿಸಿದ್ದ ಕೇಂದ್ರ ಗಣಿ, ಉಕ್ಕು ಮತ್ತು ಕಾರ್ಮಿಕ ಸಚಿವ ಶ್ರೀ ನರೇಂದ್ರ ಸಿಂಗ್ ತೋಮರ್ ಅವರನ್ನು ಭೇಟಿಯಾಗಿ ಇಲ್ಲಿ ಇಂದು ಮಾತುಕತೆ ನಡೆಸಿದರು. ಮಾತುಕತೆಯ ಪ್ರಮುಖ ಅಂಶಗಳು :

ಎಂಎಂಡಿಆರ್ ಕಾಯ್ದೆ 1957ಗೆ ಪ್ರಸ್ತಾಪಿಸಿರುವ ತಿದ್ದುಪಡಿ :

1) ಹೆಚ್ಚಿನ ಪಾರದರ್ಶಕತೆಗಾಗಿ ಅಧಿಸೂಚನೆ ಮುಖಾಂತರ ಅರ್ಜಿ ಆಹ್ವಾನಿಸಿ ಪಾರದರ್ಶಕ ಮಾನದಂಡಗಳನ್ನು ಅಳವಡಿಸುವ ಅವಶ್ಯಕತೆವಿದ್ದು, ಕಲಂ 11(3)ರಲ್ಲಿ ಇರುವ ಮಾನದಂಡಗಳನ್ನು ಬಲಪಡಿಸುವ ಬಗ್ಗೆ ರಾಜ್ಯ ಸರ್ಕಾರವು ನೀಡಿದ ಸಲಹೆಗಳನ್ನು ಒಪ್ಪಿ, ಕಲಂ 11(3)(ಜ) ರಲ್ಲಿ ಕೇಂದ್ರ ಸರ್ಕಾರಕ್ಕೆ ಹೆಚ್ಚುವರಿ ಮಾನದಂಡಗಳನ್ನು ಅಳವಡಿಸಲು ಅವಕಾಶವಿರುವುದರಿಂದ ಅದರಲ್ಲಿ ಮಾನದಂಡಗಳ ಆದ್ಯತೆ ಮತ್ತು ಪ್ರತಿಯೊಂದು ಮಾನದಂಡಗಳಿಗೆ ನೀಡಬೇಕಾದ weightage ಅನ್ನು ಕೇಂದ್ರ ಸರ್ಕಾರವು ನಿಗಧಿಪಡಿಸಲು ಕೇಂದ್ರ ಸರ್ಕಾರವು ಒಪ್ಪಿಗೆ ಸೂಚಿಸಿರುತ್ತದೆ. ಇದರಿಂದ ಗಣಿಗುತ್ತಿಗೆಗಳನ್ನು ಪಾರದರ್ಶಕವಾಗಿ ನೀಡಬಹುದಾಗಿದೆ.

2) ಗಣಿಗುತ್ತಿಗೆದಾರರ ಅರ್ಜಿಗಳನ್ನು ಮೌಲ್ಯಮಾಪನ ಮಾಡಲು ಎಂಸಿಆರ್ 1960ರಲ್ಲಿ ಇರುವ ಅರ್ಜಿ ನಮೂನೆಗಳನ್ನು ಅರ್ಥ ಪೂರ್ಣಗೊಳಿಸಲು ರಾಜ್ಯ ಸರ್ಕಾರದ ಸಲಹೆಗಳನ್ನು ಪರಿಗಣಿಸಿ ಸೂಕ್ತ ಬದಲಾವಣೆ ಮಾಡಲು ಕೇಂದ್ರ ಸರ್ಕಾರವು ಒಪ್ಪಿಗೆ ಸೂಚಿಸಿರುತ್ತದೆ.

3) ಚಾಲ್ತಿಯಲ್ಲಿರುವ ಕಬ್ಬಿಣ ಮತ್ತು ಉಕ್ಕು ಉದ್ದಿಮೆಗಳಿಗೆ ಗಣಿ ಗುತ್ತಿಗೆ ಮಂಜೂರಾತಿಯಲ್ಲಿ ಆದ್ಯತೆ ನೀಡಲು ಕಾಯ್ದೆಯಲ್ಲಿ ಅವಕಾಶ ಇಲ್ಲದೆ ಇರುವುದರಿಂದ ಕಲಂ 11(3)(e) ರಲ್ಲಿ ಅವಕಾಶ ಕಲ್ಪಿಸಲು ರಾಜ್ಯ ಸರ್ಕಾರವು ಕೋರಿದ್ದು, ಕೇಂದ್ರ ಸರ್ಕಾರವು ಒಪ್ಪಿಗೆ ಸೂಚಿಸಿರುತ್ತದೆ.

4) ಯಾವ ಯಾವ ಪ್ರದೇಶಗಳಲ್ಲಿ ಮುಖ್ಯವಾದ ಖನಿಜದ ಲಭ್ಯತೆ ಗೊತ್ತಿದೆಯೋ ಅಲ್ಲಿ Prospecting License (PL) / Reconnaissance Permit (RP) ನೀಡುವುದರೊಂದಿಗೆ ಗಣಿಗುತ್ತಿಗೆ ನೀಡಲು ಅವಶ್ಯಕತೆ ಇರುವುದಿಲ್ಲ. ಅಂತಹ ಪ್ರದೇಶಗಳನ್ನು ರಾಜ್ಯ ಸರ್ಕಾರವೇ ಅಧಿಸೂಚನೆ ಹೊರಡಿಸಿ ವಿಲೇ ಮಾಡಲು ತೀರ್ಮಾನಿಸಲಾಯಿತು.

5) ಟೆಂಡರ್ ಕಮ್ ಹರಾಜಿನ ಮೂಲಕ ಗಣಿಗಳನ್ನು ವಿಲೇ ಮಾಡಲು ಕಾಯ್ದೆಯಲ್ಲಿ ಯಾವುದೇ ಅವಕಾಶವಿರುದಿಲ್ಲ. ಆದ್ದರಿಂದ ಸೂಕ್ತ ತಿದ್ದುಪಡಿಯ ಅವಶ್ಯತೆಯ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಾಯಿತು. ಆದರೆ ಟೆಂಡರ್ ಕಮ್ ಹರಾಜು ಪ್ರಕ್ರಿಯೆ ನಡೆಸುವ ಮುನ್ನ ಸರ್ಕಾರವು ಹಲವು ಪೂರ್ವ ಸಿದ್ದತೆ ಮಾಡಿಕೊಳ್ಳಬೇಕಾಗಿದೆ. ಉದಾಹರಣೆಗೆ: ಖನಿಜ ನಿಕ್ಷೇಪ ಲಭ್ಯತೆಯನ್ನು ನಿಖರವಾಗಿ ಅಂದಾಜಿಸುವುದು ಇತ್ಯಾದಿ. _ಈ ನಿಟ್ಟಿನಲ್ಲಿ ಅನ್ವೇಶಣೆ ಕಾರ್ಯಗಳಿಗೆ ರಾಜ್ಯ ಸರ್ಕಾರದ ಸಂಸ್ಥೆಗಳನ್ನು ಬಲಪಡಿಸುವ ಅವಶ್ಯಕತೆಯ ಬಗ್ಗೆ ಕೇಂದ್ರ ಸರ್ಕಾರವು ಅಭಿಪ್ರಾಯಿಸಿತು.

6) ಪ್ರಸ್ತುತ ಚಾಲ್ತಿಯಲ್ಲಿರುವ ಮುಖ್ಯ ಖನಿಜ ರಾಜಧನವನ್ನು ಹೆಚ್ಚಿಸುವ ಕುರಿತು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಲಾಯಿತು.

7) ಸರಿಯಾದ ರಾಜಧನವನ್ನು ಸಂಗ್ರಹಿಸಲು IBM ಅನ್ನು ತಾಂತ್ರಿಕವಾಗಿ ಬಲಪಡಿಸಿ ವೈಜ್ಞಾನಿಕವಾದ Mineral Index ಪ್ರಕಟಿಸುವ ಅವಶ್ಯಕತೆ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಾಯಿತು.

8) ಕರ್ನಾಟಕ ರಾಜ್ಯದಲ್ಲಿ ಕಬ್ಬಿಣದ ಅದಿರನ್ನು ಇ-ಹರಾಜಿನ ಮೂಲಕ ವಿಲೇ ಮಾಡಲಾಗುತ್ತಿದ್ದು, ಇಡೀ ರಾಷ್ಟ್ರದಲ್ಲಿ ಇದೇ ಮಾದರಿಯಲ್ಲಿ ವಿಲೇ ಮಾಡಲು ಇ-ಪ್ಲಾಟ್‌ಫಾರಮ್ ಮೂಲಕ Mineral Exchange ಸ್ಥಾಪಿಸಲು ತೀರ್ಮಾನಿಸಲಾಯಿತು ಹಾಗೂ ಇದರೊಂದಿಗೆ ನಿಯಂತ್ರಕರನ್ನು ಮಾಡಿದಲ್ಲಿ ಅನಾವಶ್ಯಕ ದರ ಏರಿಳಿಕೆಯನ್ನು ನಿಯಂತ್ರಿಸಬಹುದಾಗಿ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಲಾಯಿತು.

9) ಮಾನ್ಯ ಸರ್ವೋಚ್ಛ ನ್ಯಾಯಾಲಯವು ರಾಜ್ಯ ಸರ್ಕಾರವನ್ನು ಪ್ರತಿ ಪಕ್ಷಕಾರರಾಗಿ ಮಾಡುವ ಗಣಿ ಪ್ರಕರಣಗಳಲ್ಲಿ ಕೇಂದ್ರ ಸರ್ಕಾರದ ಗಣಿ ಮಂತ್ರಾಲಯ, ಉಕ್ಕು ಮಂತ್ರಾಲಯ ಮತ್ತು ಪರಿಸರ ಮತ್ತು ಅರಣ್ಯ ಮಂತ್ರಾಲಯಗಳು ಒಟ್ಟಾಗಿ ರಾಜ್ಯ ಸರ್ಕಾರದೊಂದಿಗೆ ವಾದ ಮಂಡನೆ ಮಾಡುವ ಅವಶ್ಯಕತೆ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆಯಲಾಗಿ, ಕೇಂದ್ರ ಸರ್ಕಾರವು ಒಪ್ಪಿಗೆ ಸೂಚಿಸಿರುತ್ತದೆ.

10) ಇಡೀ ರಾಷ್ಟ್ರಕ್ಕೆ ಅಗತ್ಯವಿರುವ ಕಬ್ಬಿಣ ಮತ್ತು ಉಕ್ಕುಗಳ ದೃಷ್ಟಿಕೋನ ಯೋಜನೆಯೊಂದನ್ನು ಭಾರತ ಸರ್ಕಾರವು ಸಿದ್ದಪಡಿಸಿ ಅದರೊಂದಿಗೆ ಸದರಿ ಉದ್ದಿಮೆಗಳಿಗೆ ಬೇಕಾಗುವ ಖನಿಜ ನಿಕ್ಷೇಪದ ಲಭ್ಯತೆಯ ಮಾಹಿತಿಯನ್ನು ಸಹ ಒದಗಿಸಿದಲ್ಲಿ, ಮಾನ್ಯ ಸರ್ವೋಚ್ಛ ನ್ಯಾಯಾಲಯದ ಮುಂದೆ ಸಮರ್ಪಕವಾದ ಮಂಡನೆಗೆ ಅನುಕೂಲ ಆಗುತ್ತದೆ ಎಂಬುದರ ಬಗ್ಗೆ ಗಮನ ಸೆಳೆಯಲಾಯಿತು.

11) BGML ಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಯಾವುದೇ ಹೊಣೆಗಾರಿಕೆ (Liability) ನೀಡದೆ ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸಲು ಕೇಂದ್ರ ಸರ್ಕಾರವು ಸಲಹೆ ನೀಡಿದ್ದು, ರಾಜ್ಯ ಸರ್ಕಾರವು ಈ ಸಲಹೆಯನ್ನು ಸಕಾರಾತ್ಮಕವಾಗಿ ಪರಿಗಣಿಸುವುದಾಗಿ ತಿಳಿಸಿತು ಮತ್ತು ಪ್ರಸ್ತುತ BGML ಸಂಸ್ಥೆಗೆ ವ್ಯವಸ್ಥಾಪಕ ನಿರ್ದೇಶಕರಾಗಿ ರಾಜ್ಯ ಸರ್ಕಾರದ ಅಧಿಕಾರಿಯೊಬ್ಬರನ್ನು ನಿಯೋಜಿಸುವಂತೆ ಕೇಂದ್ರ ಸರ್ಕಾರವು ಮನವಿ ಮಾಡಿದ್ದು, ರಾಜ್ಯ ಸರ್ಕಾರವು ಒಪ್ಪಿಗೆ ಸೂಚಿಸಿರುತ್ತದೆ.

12) KIOCL ಸಂಸ್ಥೆಯ ಗಣಿ ಪ್ರದೇಶದ ಪರಿಸರಕ್ಕೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳನ್ನು ಮಾನ್ಯ ಸರ್ವೋಚ್ಛ ನ್ಯಾಯಾಲಯದಂತೆ ಪೂರ್ಣಗೊಳಿಸಿದ ನಂತರ ಆಸ್ತಿಯನ್ನು ರಾಜ್ಯ ಸರ್ಕಾರದ ಅರಣ್ಯ ಇಲಾಖೆಗೆ ವರ್ಗಾಯಿಸುವುದಾಗಿ ಮತ್ತು ಅದರಂತೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಮುಂದೆ ಪ್ರಸ್ತಾಪ ಸಲ್ಲಿಸುವುದಾಗಿ ಕೇಂದ್ರ ಸರ್ಕಾರವು ಅಭಿಪ್ರಾಯಿಸಿದ್ದು, ಇದಕ್ಕೆ ರಾಜ್ಯ ಸರ್ಕಾರವು ಸಹಮತಿ ಸೂಚಿಸಿದ್ದು, ಪರಿಸರ ಸಂರಕ್ಷಣ ಕ್ರಮಗಳಿಗೆ ಅಗತ್ಯವಿರುವ ಅನುದಾನವನ್ನು ಒದಗಿಸುವಂತೆ ಕೋರಲಾಯಿತು.

13) ಮಾನ್ಯ ಸರ್ವೋಚ್ಛ ನ್ಯಾಯಾಲಯ ಮತ್ತು ರಾಷ್ಟ್ರೀಯ ಹಸಿರು ಪೀಠದ ತೀರ್ಪಿನ ಹಿನ್ನಲೆಯಲ್ಲಿ ಉಪ ಖನಿಜಗಳಿಗೆ ಅನುಮತಿ ನೀಡುವಲ್ಲಿ ರಾಜ್ಯ ಸರ್ಕಾರಗಳಿಗೆ ಆಗುತ್ತಿರುವ ಸಮಸ್ಯೆಗಳ ಕುರಿತು ಸೂಕ್ತ ಪರಿಹಾರ ಒದಗಿಸುವುದಾಗಿ ಕೇಂದ್ರ ಸರ್ಕಾರವು ಭರವಸೆ ನೀಡಿದೆ.